ಸೌಲಭ್ಯ ಅಭಿವೃದ್ಧಿ ಸಚಿವರು):

ಅ) ಹುಬ್ಬಳ್ಳಿಯ ವಿಮಾನ ನಿಲ್ದಾಣವನ್ನು 1989ರಲ್ಲಿ ವಾಯುಧೂತ್ ವಿಮಾನಗಳ ಹಾರಾಟಕ್ಕಾಗಿ ನಿರ್ಮಿಸಲಾಗಿತ್ತು. ಅಂದಿನಿಂದ ವಾಯುಧೂತ್, ಎನ್.ಇ.ಪಿ.ಸಿ. ಮತ್ತು ಗುಜರಾತ್ ಏರ್ ವೇಸ್‌ರವರು ಹುಬ್ಬಳ್ಳಿಯಿಂದ ವಿಮಾನ ಸಂಚಾರ ನಡೆಸಿದ್ದವು. ಆದಾಗ್ಯೂ, ಈ ಎಲ್ಲಾ ಏರ್‌ಲೈನ್ಸ್‌ಗಳು ನಾನಾ ಕಾರಣಗಳಿಂದಾಗಿ ತಮ್ಮ ವಾಯು ಸಂಚಾರವನ್ನು ಮುಂದುವರೆಸಿಲ್ಲ. ವಿರಳ ಸಂಚಾರ ಪ್ರಮಾಣದಿಂದಾಗಿ ಆರ್ಥಿಕವಾಗಿ ಲಾಭದಾಯಕವಲ್ಲದೆ ಇರುವುದು ಪ್ರಮುಖ ಕಾರಣಗಳಲ್ಲೊಂದೆಂದು ತಿಳಿದು ಬಂದಿದೆ.

ಆ) ಅಭಿವೃದ್ಧಿಪಡಿಸಿದ ಸೌಕರ್ಯಗಳು 50 ಆಸನಗಳುಳ್ಳ ಸಣ್ಣ ವಿಮಾನಗಳ ಹಾರಾಟಕ್ಕೆ ಸೂಕ್ತವಾಗಿರುತ್ತದೆ ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ (ಎಎಐ)ರವರಿಂದ ರಾತ್ರಿ ಸಂಚಾರಕ್ಕೆ ನೆಲದೀಪಗಳ ವ್ಯವಸ್ಥೆಯನ್ನು ಹುಬ್ಬಳ್ಳಿಯ ವಿಮಾನ ನಿಲ್ದಾಣದಲ್ಲಿ ಮೇ 1999ರಲ್ಲಿ ಕೈಗೊಳ್ಳಲಾಗಿತ್ತು. ಹುಬ್ಬಳ್ಳಿ ಉದ್ದಿಮೆ ಬೆಳವಣಿಗೆಯು ಇದರಿಂದ ಆತಂಕಕ್ಕೀಡು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸರ್ಕಾರವು ಪ್ರಸ್ತುತವಿರುವ ಏರ್‌ಲೈನ್ಸ್‌ಗಳಾದ ಇಂಡಿಯನ್ ಏರ್‌ಲೈನ್ಸ್, ಜೆಟ್ ಏರ್‌ವೇಸ್ ಮತ್ತು ಸಹರಾ ಏರ್‌ವೇಸ್‌ರವರುಗಳೊಂದಿಗೆ ಹುಬ್ಬಳ್ಳಿಯಿಂದ ಹಾಗೂ ಹುಬ್ಬಳ್ಳಿಗೆ ಪ್ರತಿನಿತ್ಯ ವಾಯು ಸಂಚಾರ ಪ್ರಾರಂಭಿಸುವ ವಿಷಯದಲ್ಲಿ ಮಾತುಕತೆ ನಡೆಸುತ್ತಿದೆ.

ಬಾಗೇಪಲ್ಲಿ ತಾಲ್ಲೂಕು ಚೇಳೂರು ಗ್ರಾಮದ ಪೋಲೀಸ್ ಠಾಣೆಯನ್ನು ಮೇಲ್ದರ್ಜೆಗೇರಿಸುವುದು.

1620(2197)

ಶ್ರೀ ಚೌಡರೆಡ್ಡಿ(ಚಿಂತಾಮಣಿ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಬಾಗೇಪಲ್ಲಿ ತಾಲ್ಲೂಕು ಚೇಳೂರು ಹೋಬಳಿ ಆಂಧ್ರ ಗಡಿಗೆ ಹೊಂದಿಕೊಂಡಿದ್ದು ಆ ಪ್ರದೇಶದಲ್ಲಿ ಹೆಚ್ಚಿಗೆ ಡಕಾಯಿತಿಗಳು, ನಕ್ಸಲೀಯರ ಹಾವಳಿ ಜಾಸ್ತಿಯಾಗಿದ್ದು ಸಾರ್ವಜನಿಕರಿಗೆ ರಕ್ಷಣೆ ಇಲ್ಲದ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಚಿಂತಾಮಣಿ ಕ್ಷೇತ್ರ ಚೇಳೂರಿನಲ್ಲಿ ಒಂದು ಔಟ್‌ಪೋಸ್ಟ್ ಪೋಲೀಸ್ ಠಾಣೆ ಇದ್ದು ಸಾರ್ವಜನಿಕರಿಗೆ

ರಕ್ಷಣೆ ಕೊಡುವಲ್ಲಿ ವಿಫಲರಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಇ) ಸದರಿ ಪೊಲೀಸ್ ಠಾಣೆಯನ್ನು ಒಂದು ಸುಸಜ್ಜಿತ ಪೋಲೀಸ್ ಠಾಣೆಯಾಗಿ ಪರಿವರ್ತಿಸಿ ಸಬ್-ಇನ್ಸ್‌ಪೆಕ್ಟರ್ ಮತ್ತು ವಾಹನದೊಂದಿಗೆ ಇತರ ಸಿಬ್ಬಂದಿ ವರ್ಗದವರನ್ನು ನೇಮಿಸುವ ಬಗ್ಗೆ ಅನೇಕ ಸಲ ಸಾರ್ವಜನಿಕರು ಪ್ರಯತ್ನಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ) ಇಲ್ಲ.

ಚೇಳೂರು ಗ್ರಾಮದಲ್ಲಿ ಇರುವ ಔಟ್‌ಪೋಸ್ಟ್ ಪೋಲೀಸ್ ಠಾಣೆಯನ್ನು ಪೋಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೌದು, ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿರುವ ಕ್ಲಬ್‌ಗಳ ಮಾಹಿತಿ.

1623(1940)

ಶ್ರೀ ಚೆನ್ನಿಗಪ್ಪ .ಸಿ(ಕೊರಟಗೆರೆ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರದಿಂದ ಅನುಮೋದಿತಗೊಂಡು ನಡೆಯುತ್ತಿರುವ ಕ್ಲಬ್‌ಗಳ ಸಂಖ್ಯೆ ಎಷ್ಟು?

ಆ) ಹಲವಾರು ಕ್ಲಬ್‌ಗಳು ಸರ್ಕಾರದಿಂದ ಅನುಮೋದನೆಗೊಳ್ಳದೆ ಸರ್ಕಾರಕ್ಕೆ ವರ್ಷದ ವಂತಿಕೆ ತೆರಿಗೆಯನ್ನು ನೀಡದೆ ಇರುವ ಕ್ಲಬ್‌ಗಳ ಸಂಖ್ಯೆ ಎಷ್ಟು ಇವುಗಳ ಮೇಲೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಇ) ಈ ಕ್ಲಬ್‌ಗಳಲ್ಲಿ ಅವ್ಯವಹಾರ ಪ್ರಸಂಗಗಳು ಹೆಚ್ಚಾಗಿರುವುದರಿಂದ ಸರ್ಕಾರವು ಸಾರ್ವಜನಿಕ ಹಿತದೃಷ್ಟಿಯಿಂದ ಇವುಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳುವುದೇ?